ಬಳ್ಳಾರಿಯಲ್ಲಿ ಕರ್ನಾಟಕ ಗೃಹ ಮಂಡಳಿಯು ಕಟ್ಟಿಸಿದ ಮನೆಗಳ ಬಗ್ಗೆ ಕಳಪೆ ಕೆಲಸ.

೨೩೯. ಶ್ರೀ ಎಂ. ರಾಮಪ್ಪ, (ಬಳ್ಳಾರಿ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಒಪಿಡಿ ಬಳಿ ಕರ್ನಾಟಕ ಗೃಹ ಮಂಡಳಿಯು ಕಟ್ಟಿಸಿದ ಮನೆಗಳ ನಿರ್ಮಾಣ ಕಾರ್ಯದಲ್ಲಿ ಕಳಪೆ ಕೆಲಸದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಸದರಿ ಕಳಪೆ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಅಧಿಕಾರಿಗಳ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಇ) ಸದರಿ ಮನೆಗಳನ್ನು ನಿರ್ಮಾಣ ಮಾಡಿದಾಗ ನಿಗದಿ ಮಾಡಿದ ಮನೆ ಬೆಲೆ ಮತ್ತು ಮನೆಗಳನ್ನು ಹಂಚಿಕೆ ಮಾಡಿದವರಿಗೆ ಸ್ವಾಧೀನಕ್ಕೆ ಕೊಟ್ಟಾಗ ನಿಗದಿ ಮಾಡಿದ ಬೆಲೆಗಳೇನು ? (ಪ್ರತಿಯೊಂದು ಯೋಜಿತ ಮನೆಗಳ ಬೆಲೆಯನ್ನು ನಮೂದಿಸುವುದು)

ಈ) ವ್ಯತ್ಯಾಸಕ್ಕೆ ಕಾರಣಗಳೇನು ?

ಶ್ರೀ ಮೊಹಮದ್ ಮೊಯಿನುದ್ದೀನ್ (ರಾಜ್ಯ ವಸತಿ ಸಚಿವರು).—

ಅ) ಹೌದು.

ಆ) ಲೋಕಾಯುಕ್ತ ವರದಿಯ ಮೇರೆಗೆ ಸದರಿ ಕಳಪೆ ಕೆಲಸದ ಬಗ್ಗೆ ಜವಾಬ್ದಾರಿಯುತ ಅಧಿಕಾರಿ ನೌಕರರನ್ನು ಸರ್ಕಾರವು ಅಮಾನತ್ತಿನಲ್ಲಿಟ್ಟಿತು ತರುವಾಯ ಸದರಿ ಆದೇಶವನ್ನು ಕರ್ನಾಟಕ ಅಡ್ಮಿನಿಸ್ಟ್ರೇಷನ್ ಟ್ರಿಬುನಲ್ ವಜಾ ಮಾಡಿತು. ಸದರಿ ನೌಕರರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಮತ್ತು ವಿಚಾರಣೆಯನ್ನು ಲೋಕಾಯುಕ್ತಕ್ಕೆ ವಹಿಸಿರುತ್ತೆ.

ಇ) ಅಧಿಸೂಚಿತ ಬೆಲೆ ಮತ್ತು ಮನೆಗಳನ್ನು ಸ್ವಾಧೀನಕ್ಕೆ ಕೊಟ್ಟಾಗ ಸೂಚಿತ ತಾತ್ಕಾಲಿಕ ಬೆಲೆ ಈ ಕೆಳಕಂಡಂತಿದೆ.

(ರೂ.ಗಳಲ್ಲಿ)

	ಅಧಿಸೂಚಿತ ಬೆಲೆ	ತಾತ್ಕಾಲಿಕ ಬೆಲೆ
ಇಡಬ್ಲ್ಯೂ ಎಸ್	೧೪,೪೪೫	೧೭,೨೫೮
ಎಲ್ ಐ ಜಿ	೨೪,೬೦೦	೪೦,೩೬೭
ಎಂ ಐ ಜಿ/೧	೩೫,೬೭೦	೫೧,೮೨೧
ಎಂ ಐ ಜಿ/೨	೫೯,೦೪೦	೭೯,೦೦೨

ಈ) ೧ ಭೂಮಿಯು ಮೆದುವಾದ ಪ್ರಯುಕ್ತ ತಳಪಾಯದ ಆಳ ೧.೨ ಮೀ ಗಳಿಂದ ೧.೫ ಮೀ ಗಳಾದಂದರಿಂದಲೂ ಅಂದಾಜಿನಲ್ಲಿ ೨,೭೫ ಸೂಚಿಸಿದ್ದು, ಪಾಯದ ಬಗ್ಗೆ ಸಾಮಗ್ರಿಗಳು ಪಾಯದ ಮತ್ತು ಪಾಯದ ಮೇಲೆ ಹೆಚ್ಚಿನ ಪ್ರಮಾಣವು ಬೇಕಾಯಿತು.

೨ ನಿರ್ಮಾಣ ಕಾಲದಲ್ಲಿ ಸಿಮೆಂಟು ಮತ್ತು ಉಕ್ಕಿನ ಬೆಲೆಗಳು ಏರಿ ಹೋದವು.

೩ ಟೆಂಡರ್ ಪ್ರಿವಿಯಂ ಮೇಲೆ ಶೇ. ೪೩ ರಷ್ಟು ಹೆಚ್ಚಾದಂದು.

೪ ಹೆಚ್ಚಿನ ಐಟಂಗಳಾದ ಕಡಪ ಕಲ್ಲುಗಳ ಹಾಸುವಿಕೆಯಿಂದ ಬೆಲೆ ಏರಿ ಹೋಯಿತು.